ಭಿನ್ನವಾದ ಮದುವೆಯ ಶಾಸ್ತ್ರಗಳು ಶುರುವಾಗಿದ್ದವು. ನನ್ನನ್ನು ಶಾಸ್ತ್ರೋಕ್ತವಾಗಿ ದತ್ತು ಪಡೆದ ತಾತ್ಕಾಲಿಕ ಅಪ್ಪ ಅವ್ವನೂ ಜೊತೆಗಿದ್ದರು. ಯಾವ ಶಾಸ್ತ್ರವನ್ನೂ ಮುಖ ಎತ್ತಿ ನೋಡದೆ ತಲೆ ತಗ್ಗಿಸಿಯೇ ಕುಳಿತಿದ್ದ ನನಗೆ, ತಾಳಿ ಕಟ್ಟುವಾಗ ಕತ್ತು ಬಗ್ಗಿಸೆಂದು ಯಾರೂ ಪ್ರತ್ಯೇಕವಾಗಿ ಹೇಳಬೇಕಾಗಿರಲಿಲ್ಲ. ಹತ್ತು ಗಂಟೆಗೆ ಮದುವೆ ಶಾಸ್ತ್ರಗಳೆಲ್ಲ ಮುಗಿದಿದ್ದವು. ನನ್ನ ದುಪ್ಪಟ್ಟು ವಯಸ್ಸಿನವನಿಗೆ ಹೆಂಡತಿಯಾಗಿದ್ದೆ. ಮದುವೆಯ ಅನಂತರ ಚಹಾ ತಿಂಡಿ ವ್ಯವಸ್ಥೆಗಳು ನಡೆದವು. ಶುಭಕೋರುತ್ತಿದ್ದವರ ಮಾತುಗಳನ್ನು ಹೆಸರು ಗೊತ್ತಿಲ್ಲದ ಗಂಡನ ಪಕ್ಕ ನಿಂತು ಕೇಳಿಸಿಕೊಳ್ಳುತ್ತಿದ್ದೆ. ಅವರು ಹೇಳುವ ಯಾವ ಮಾತೂ ಸರಿಯಾಗಿ ಅರ್ಥವಾಗುತ್ತಿರಲಿಲ್ಲ. ಎಲ್ಲರೂ ನನ್ನನ್ನು ಶಾರದಾ ಎಂದೇ ಕರೆಯುತ್ತಿದ್ದರು. ದೂರದಿಂದ ಪುರೋಹಿತರು, ವಿಗ್ನೇಶಾ... ಪೂಜೆಗ್ ಬಾ ಎಂದು ಕರೆಯುತ್ತಿದ್ದುದು ಕೇಳಿಸಿತು. ನನ್ನ ಸೀರೆಗೆ ಕಟ್ಟಿದ್ದ ದೋತಿಯನ್ನು ಎಳೆದುಕೊಂಡೇ ಪಕ್ಕದಲ್ಲಿ ನಿಂತಿದ್ದ ಜೀವ ಚಲಿಸಲಾರಂಭಿಸಿತು. ಗಂಡನ ಹೆಸರು ಗೊತ್ತಾಗಿತ್ತು. ಎಲ್ಲಾ ಶಾಸ್ತ್ರ, ಬೀಳ್ಕೊಡುಗೆಯ ಬಳಿಕ ಮನೆಯಲ್ಲಿ ಉಳಿದವರು ನಾವು ಕೆಲವೇ ಕೆಲವು ಜನರು. ಮೂರುಗಂಟೆಗೆಲ್ಲ ದೊಡ್ಡವ್ವ ಮತ್ತು ಉಳಿದವರು ತಮ್ಮ ವ್ಯವಹಾರವನ್ನು ಮುಗಿಸಿ ಹೊರಟಿದ್ದರು. ಮನಸಿನ ತುಂಬಾ ದುಗುಡವಿದ್ದರೂ ಒಂದೇ ಒಂದು ಕಣ್ಣೀರಿನ ಹನಿ ಕೆಳಗೆ ಬೀಳಲಿಲ್ಲ. ಸ್ವಲ್ಪ ಸಮಯಕ್ಕೆಲ್ಲ ಮನೆ ಪೂರ್ತಿ ಖಾಲಿಯಾಗಿತ್ತು. ಅತ್ತೆ, ಮಾವ, ಗಂಡ ಮತ್ತು ನನ್ನನ್ನು ಬಿಟ್ಟು ಬೇರೊಬ್ಬರು ಉಳಿಯಲಿಲ್ಲ. ಮಾತಿನ ಮೊದಲು, ಮಧ್ಯೆ ಮತ್ತು ಕೊನೆಗೆ ವಿಷಯವೇ ಇಲ್ಲದೆ ನಗುತ್ತಿದ್ದ ಗಂಡ, ಬಾಯಲ್ಲಿ ಕವಳ ತುಂಬಿಕೊಂಡು ಅಗಿಯುತ್ತ ಕುಳಿತಿರುತ್ತಿದ್ದ ಮಾವ, ಮನೆಯ ಎಲ್ಲಾ ಜವಾಬ್ದಾರಿಯನ್ನು ಹೊತ್ತು ಸಾಗುತ್ತಿದ್ದ ಅತ್ತೆಯ ನಡುವೆ ನನ್ನ ಜೀವನ ಶುರುವಾಗಿತ್ತು.

ಇಂದಿಗೆ ಶಾರದೆಯಾಗಿ ಒಂಬತ್ತು ವರ್ಷಗಳು ಕಳೆದುಹೋದವು. ಮೂಲ ಹೆಸರನ್ನೂ ಮರೆಸುವಷ್ಟು ಶಾರದೆ ನನ್ನೊಳಗೆ ತುಂಬಿಕೊಂಡಿದ್ದಳು. ಬೇಜವಾಬ್ದಾರಿಯ ಮೂರ್ಖ ಗಂಡನಿಗೆ ವಿಚ್ಛೇದನ ನೀಡಿ ಎರಡು ವರ್ಷದ ಮೇಲಾಯಿತು. ಶತಪ್ರಯತ್ನದಿಂದ ವಿಚ್ಛೇದನಕ್ಕೆ ಒಪ್ಪಿಸಿ ಮುಂದಿನ ಜೀವನಕ್ಕೆ ಮಾರ್ಗ ತೋರಿಸಿದ್ದ ಅತ್ತೆ ತೀರಿಕೊಂಡ ಹನ್ನೊಂದು ದಿನದ ಸೂತಕದ ಸ್ನಾನ ಮುಗಿಸಿ ಕುಳಿತಿದ್ದೆ. ಮದುವೆಯ ಅನಂತರ ಅವ್ವನೂ ಆಗಿದ್ದ ಅತ್ತೆ, ನಿಜವಾದ ಅವ್ವನನ್ನು ಮರೆಸಿದ್ದಳು. ಮದುವೆಯ ಹಿಂದಿನ ದಿನ ಕೊನೆಯದಾಗಿ ನೋಡಿದ ಅವ್ವನ ಮುಖ ಮತ್ತೆ ಯಾವತ್ತೂ ಕಾಡಲಿಲ್ಲ. ಎದುರು ಸಿಕ್ಕುವ ಸಂದರ್ಭವೂ ಬಂದಿರಲಿಲ್ಲ. ಹುಟ್ಟಿದ ಊರಿನ ಜೊತೆ ಅಲ್ಲಿನ ಜನರ ಸಂಬಂಧವೂ ಕಡಿದು ಹೋಗಿತ್ತು. ಮದುವೆಯ ಬಳಿಕ ಹೊಸದಾಗಿ ನನ್ನ ಜೀವನಕ್ಕೆ ಪ್ರವೇಶಿಸಿದವರು ಅತ್ತೆ ಮಾತ್ರ. ಗಂಡ ನಿಜವಾದ ಯಾವುದೇ ಅರ್ಥದಲ್ಲೂ ಗಂಡನಾಗಲಿಲ್ಲ. ಹಾಸಿಗೆಯಲ್ಲೂ ಮೌನವಾಗಿದ್ದ ನಮ್ಮ ಸಂಬಂಧ ಹಾಗೆಯೇ ಮುದುಡಿತ್ತು. ಯಾವುದೇ ಕೆಲಸವನ್ನೂ ಮಾಡದ, ಜವಾಬ್ದಾರಿ ಎಂದರೇನೆಂದೂ ತಿಳಿಯದ ಗಂಡ, ದಿನವೆಲ್ಲಾ ಊರು ಸುತ್ತುತ್ತಾ, ಬಾಯಿತುಂಬಾ ಗುಟ್ಕಾ ತುಂಬಿಕೊಂಡಿರುತ್ತಿದ್ದ. ಮನೆಯೆಂಬ ವ್ಯವಸ್ಥೆಯ ಸಂಪೂರ್ಣ ಜವಾಬ್ದಾರಿ ಹೊತ್ತ ಅತ್ತೆಗೆ ಶಿಷ್ಯಳಾಗಿ, ಮಗಳಾಗಿ ಜೀವನ ಸಾಗಿಸುತ್ತಿದ್ದೆ. ಕಷ್ಟವೆಂದರೆ ಕಷ್ಟವೂ ಅಲ್ಲದ, ಸುಖವೆಂದರೆ ಸುಖವೂ ಅಲ್ಲದ ಬದುಕು. ಮದುವೆಯಾಗಿ ಮೂರು ವರ್ಷ ಕಳೆಯುವ ಹೊತ್ತಿಗೆಲ್ಲಾ, ಅಕ್ಕಪಕ್ಕದ ಮನೆಯವರ, ಸಂಬಂಧಿಕರ ಮಾತು ಕೇಳತೊಡಗಿತ್ತು. ಎಲ್ಲರೂ ಮಗುವಿನ ಶುಭಸಮಾಚಾರಕ್ಕೆ ಕಾಯುತ್ತಿರುವವರೇನೋ ಎನ್ನುವಂತೆ ಮತ್ತೆ ಮತ್ತೆ ಅದೇ ಮಾತುಗಳು ಪುನರಾವರ್ತಿಸಲು ತೊಡಗಿದವು. ಗಂಡ ಮಾತ್ರ ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ಸುತ್ತಾಡಿಕೊಂಡಿದ್ದ. ಇದೇ ವಿಚಾರಕ್ಕೆ ಬೇಸತ್ತು, ನನ್ನ ಜೊತೆ ಅತ್ತೆಯೂ ಅಕ್ಕಪಕ್ಕದ ಮನೆಗಳಿಗೆ, ಶುಭಸಮಾರಂಭಗಳಿಗೆ ಹೋಗುವುದನ್ನು ನಿಲ್ಲಿಸಿದ್ದರು. ಕೊನೆಗೊಂದು ದಿನ ಅತ್ತೆಯೇ ಧೈರ್ಯ ಮಾಡಿ ನನ್ನನ್ನು